Date
Regd No
Karnataka Legislature Library

ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Wednesday, the 21st March 1979/Phalguna 30, 1900 S. E.

The House met in the Assembly Chamber, Vidhana Soudha, at One of the Clock.

[MR. SPEAKER (SRI P. VENKATARAMANA) in the Chair]

STARRED QUESTIONS
(to which oral answers were given)

Death of Animals in Bannerghatta National Park

30. SRI M. SRINIVAS (Srirangapatna).—Will the Minister for Food and Forests be pleased to state :—

(*a*) the number of Lions and Tigers in the Bannerghatta National Park near Bangalore City ;

(*b*) whether Government is aware of th deaths of some lions in the Park ;

(*c*) the number of lions dead ;

(*d*) the reasons for their deaths ?

SRI G. RAMEGOWDA (Minister for Food and Forests).—

(*a*) Lions ... 10 as on 2-1-1979
Tigers ... nil as on 2-1-1979

(*b*) Yes.

(*c*) Four (4).

(*d*) Due to infection of Paws.

ಶ್ರೀ ಎಂ. ಶ್ರೀನಿವಾಸ್.—ನನ್ನ ಪ್ರಶ್ನೆಯ (ಅ) the number of Lions and Tigers in the Banneragatta National Park near Bangalore city, ಎಂದು ಕೇಳಿದ್ದಕ್ಕೆ ಉತ್ತರವಾಗಿ 'Tigers ... Nil as on 2nd January 1979' ಎಂದು ಉತ್ತರ ಕೊಟ್ಟಿದ್ದೀರಿ. ಅಲ್ಲಿದ್ದ ಹುಲಿಗಳು ಸತ್ತು ಹೋಗಿಲ್ಲವೇ ಅಥವಾ ಬನ್ನೇರುಘಟ್ಟ ಪಾರ್ಕ್‌ನಲ್ಲಿ ಹುಲಿಗಳು ಇರಲಿಲ್ಲವೇ ?

† ಶ್ರೀ ಜಿ. ರಾಮೇಗೌಡ.—ಅಲ್ಲಿ ಸತ್ತಿರುವುದು ಹುಲಿಯಲ್ಲ 'ಸಿಂಹ' ಅಲ್ಲಿರುವುದು ಸಿಂಹ, ಹುಲಿಯಲ್ಲ. ಅಲ್ಲಿ ಹುಲಿಗಳು ಇಲ್ಲವೇ ಇಲ್ಲ ಎಂದು ಬರೆದುಬಿಡಬಹುದಾಗಿತ್ತು, ಆದರೆ ನಮ್ಮ ಉತ್ತರದಲ್ಲಿ ಸ್ವಲ್ಪ ಸೌಜನ್ಯತೆಯನ್ನು ತೋರಿಸಬೇಕು ಎಂದು ಇದ್ದ ವಿಚಾರವನ್ನು ಹೇಳಿದ್ದೇವೆ. ಇದರಿಂದ ಏನಾದರೂ ತಪ್ಪಾಗಿದ್ದರೆ ಕ್ಷಮಿಸಿ.

ಶ್ರೀ ಎಂ. ಶ್ರೀನಿವಾಸ್.—ಅಲ್ಲಿ ಹುಲಿ ಯಾವುದೂ ಸತ್ತಿಲ್ಲವೇ ?

ಶ್ರೀ ಜಿ. ರಾಮೇಗೌಡ.—ಬನ್ನೇರುಘಟ್ಟದಲ್ಲಿ ಹುಲಿ ಇಲ್ಲವೂ ಇಲ್ಲ, ಯಾವುದು ಸತ್ತೂ ಇಲ್ಲ.

ಶ್ರೀ ಎಂ. ಶ್ರೀನಿವಾಸ್.—ನಾಲ್ಕು ಸಿಂಹಗಳು ಸತ್ತಿವೆ ಎಂದು ಉತ್ತರದಲ್ಲಿ ಕೊಡಲಾಗಿದೆ, ಸತ್ತಿರುವುದು, ಇನ್‌ಫೆಕ್ಷನ್ಸ್‌ನಿಂದ ಎಂದೂ ಸಹ ಹೇಳಿದ್ದೀರಿ. ಈ ಇನ್‌ಫೆಕ್ಷನ್ಸ್‌ನ್ನು ತಡೆಗಟ್ಟುವುದಕ್ಕೆ ಸರ್ಕಾರದವರು ಏನಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ ?

ಶ್ರೀ ಜಿ. ರಾಮೇಗೌಡ.—ಸತ್ತಂತ ನಾಲ್ಕು ಮರಿಗಳು ಸುಮಾರು ಒಂದು-ಒಂದೂವರೆ ವಯಸ್ಸಿನವು. ಡಾಕ್ಟರ್ ಅವರ ಅಭಿಪ್ರಾಯದಂತೆ, ಇವುಗಳು ನೆಲದ ಮೇಲೆ ಓಡಾಡುವಾಗ ತೇವ ತಗುಲಿ, ಅಂಗೈ ತಿಮರು ಬಂದ ಹಾಗೆ ಆಗಿದೆ. ಡಾಕ್ಟರ್ ಅವರು ಇದಕ್ಕೆ ಔಷಧಿ ಹಾಕಿದಾಗ ಇದಕ್ಕೆ ಮತ್ತೆ ಹುಳು ಬಿದ್ದಿದೆ. ಹುಳು ಬಿದ್ದು ಜ್ವರ ಬಂದಿದೆ. ಇದಾದ ಮೇಲೆ ಅವುಗಳು ಒಂದರ ಮೇಲೆ ಒಂದು ಬಿದ್ದು ಗಾಯವಾಗಿ, ಕೊನೆಗೆ ಸತ್ತು ಹೋಗಿವೆ.

ಶ್ರೀ ಎಂ. ಶ್ರೀನಿವಾಸ್.—ಸಿಂಹಗಳಿಗೆ ಸರಿಯಾದ ಆಹಾರ ಕೊಡದೆ ಇರುವುದರಿಂದ ಇವುಗಳು ಒಂದೊಂದು ಗುದ್ದಾಡಿ ಗಾಯವಾಗಿ ಸತ್ತುಹೋಗಿವೆ. ತಾವು ಇದಕ್ಕೆ ಏನು ಹೇಳುತ್ತೀರಿ ?

ಶ್ರೀ ಜಿ. ರಾಮೇಗೌಡ.—ಮಾನ್ಯ ಸದಸ್ಯರು ಹೇಳುವುದರಲ್ಲಿ ಸ್ವಲ್ಪ ಭಾಗ ಸತ್ಯ ಇದೆ. ಅವರು ಪ್ರಶ್ನೆಯನ್ನು ಕೇಳಿದ ಮೇಲೆ ಅಲ್ಲಿ ಒಂದು ಗಂಡು ಸಿಂಹ, ಒಂದು ಹೆಣ್ಣು ಸಿಂಹ ಗುದ್ದಾಡಿ, ಹೆಣ್ಣು ಸಿಂಹ ಸತ್ತಿದೆ. ಇದಾದ ಮೇಲೆ, ಇನ್ನೊಂದು ಹೆಣ್ಣು ಸಿಂಹ ಮೂರು ಮರಿಗಳನ್ನು ಹಾಕಿದೆ ಒಂದು ಹೆಣ್ಣು ಸಿಂಹ ಸತ್ತಿದೆ, ಮತ್ತೆ ಮೂರು ಮರಿಗಳು ಹೆಚ್ಚಾಗಿವೆ.

ಶ್ರೀ ಎಚ್. ಗಂಗಾಧರನ್.—ಮಾನ್ಯ ಮಂತ್ರಿಗಳು ಅರಣ್ಯವನ್ನು ಪ್ರವೇಶ ಮಾಡಿದ ಮೇಲೆ ಆನೆಗಳು ಸತ್ತು ಹೋದುವು, ಈಗ ಸಿಂಹಗಳು ಸತ್ತು ಹೋಗಿವೆ. ಇವುಗಳನ್ನು ರಕ್ಷಣೆ ಮಾಡಲು ಸರ್ಕಾರದಿಂದ ಎಷ್ಟು ಹಣ ಖರ್ಚಾಗಿದೆ ?

ಶ್ರೀ ಜಿ. ರಾಮೇಗೌಡ.—ಇದರ ಬಗ್ಗೆ ನನ್ನಲ್ಲಿ ಲೆಕ್ಕ ಇಲ್ಲ. ನಾನು ಮಂತ್ರಿಯಾದ ಮೇಲೆ ಆನೆಗಳು ಸತ್ತಿರುವುದು ನಿಜ, ಸಿಂಹಗಳು ಸತ್ತಿರುವುದು ನಿಜ. ಇದು ಸ್ವಾಭಾವಿಕ. ಮಾನ್ಯ ಗಂಗಾಧರನ್ ಅವರು ಮಂತ್ರಿಯಾದ ಮೇಲೆ ಜನಗಳು ಸಾಯುವುದು ನಿಜ.

ಶ್ರೀ ಕೆ. ಎಂ. ತಮ್ಮಯ್ಯ.—ನಾವು ಆನೇಕ ಕಾಡುಗಳಲ್ಲಿ ನೋಡಿದಾಗ, ವನದೇವತೆಯು ಆಭರಣಗಳು ಈ ಪ್ರಾಣಿಗಳು ಎಂದು ಬೋರ್ಡು ಬರೆಯಿಸಿ ಹಾಕಿದ್ದಾರೆ. ವನ್ಯ ಮೃಗಗಳೆಲ್ಲ ಹೋಗಿ ಈಗ ವನದೇವತೆ ನಿರಾಭರಣ ಸುಂದರಿಯಾಗಿದ್ದಾಳೆ. ಈ ವನ್ಯ ಮೃಗಗಳಿಗೆ ಸರಿಯಾದ ರಕ್ಷಣೆ ಕೊಟ್ಟು, ಅವುಗಳನ್ನು ಸರಿಯಾದ ರೀತಿಯಲ್ಲಿ ಬೆಳೆಸುವುದಕ್ಕೆ ತಾವು ಹೊಸ ಯೋಜನೆಯನ್ನಾದರೂ ಮಾಡಿದ್ದೀರಾ?

ಶ್ರೀ ಜಿ. ರಾಮೇಗೌಡ.—ಮೃಗಗಳ ಸಂರಕ್ಷಣೆಗೋಸ್ಕರ ನಾವು ಸಾಕಷ್ಟು ಏರ್ಪಾಡುಗಳನ್ನು ಮಾಡುತ್ತಿದ್ದೇವೆ. ಇದರ ಬಗ್ಗೆ ನಮ್ಮ ಯೋಜನೆಯೂ ಭಾರಿ ದೊಡ್ಡದಾಗಿದೆ. ಹಣದ ಅಭಾವದಿಂದ ಇದರ ಮುನ್ನಡೆ ನಿಧಾನವಾಗಿದೆ. ಆದರೆ ಆಸಕ್ತಿ ಮಾತ್ರ ಜಾಸ್ತಿಯಾಗಿದೆ. ಇವುಗಳನ್ನು ಬಂಗಾರ ಎಂದು ಏಕೆ ಹೇಳುತ್ತೇವೆಂದರೆ, ನಮ್ಮ ಮುದ್ದು ಮಕ್ಕಳನ್ನು ನಾವು ಬಂಗಾರ ಎಂದು ಕರೆಯುವುದಿಲ್ಲವೇ ಹಾಗೆ ಕಾಡು ಪ್ರಾಣಿಗಳನ್ನು ಈ ರೀತಿಯಾಗಿ ಪ್ರೀತಿಯಿಂದ ಕರೆಯುತ್ತೇವೆ.

ಶ್ರೀ ಎಂ. ಶ್ರೀನಿವಾಸ್.—ತಾವು ಮಂತ್ರಿಗಳಾದ ಮೇಲೆ ಆನೆಗಳು, ಸಿಂಹಗಳು, ಮತ್ತು ಮೈಸೂರು ಜೂ ನಲ್ಲಿ ಹುಲಿಗಳು ಸತ್ತಿವೆ.

---

† indicates that remarks or speeches have not been revised by the member concerned.

ಶ್ರೀ ಜಿ. ರಾಮೇಗೌಡ.—ಸಾಯುವುದು, ಹುಟ್ಟುವುದು ನಮ್ಮ ಯತ್ನವಲ್ಲ. ಈ ಪ್ರಾಣಿಗಳು ಸಾಯದಂತೆ ನೋಡಿಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡಬೇಕು. ಕಳೆದ ವರ್ಷ ಸುಮಾರು ೩೨ ಪ್ರಾಣಿಗಳಿಗೆ ನಾವು ಪ್ರೊಟೆಕ್ಷನ್ ಕೊಟ್ಟರೂ ಸತ್ತು ಹೋಗಿವೆ. ಸುಮಾರು ೭೮ ಪ್ರಾಣಿಗಳು ನಾನು ಮಂತ್ರಿಯಾಗುವುದಕ್ಕೆ ಮುಂಚೆಯೇ ಸತ್ತುಹೋಗಿದ್ದವು, ನಾನು ಬಂದ ಮೇಲೆ ಅರ್ಧ ಸಾಯುವುದು ಕಡಿಮೆಯಾಗಿದೆ.

Financial assistance to SC/ST Land Grantees

36. SRI S. S. ARAKERI (Balloli).—Will the Minister for Revenue be pleased to state :—

(*a*) the total No. of acres of land granted to S.C./S.T. since the last 3 years (Please furnish Districtwise figures) ;

(*b*) the steps Government has taken to finance such land grantees for the development of these lands ?

SRI B. BASAVALINGAPPA (Minister for Revenue).—

(*a*) *Acres Guntas*

1,31,549—33.

District-wise figures are furnished below :

	District	*District-wise figures*
1.	Chikmaglur	2411-00
2	Dakshina Kannada	2769-34
3.	Chitradurga	10032-24
4.	Bidar	12872-15
5.	Kodagu	2049-31
6.	Mandya	3352-24
7.	Belgaum	1114-21
8.	Bijapur	672-13
9.	Hassan	5933-07
10.	Dharwad	2535-06
11.	Raichur	7439-37
12.	Uttara Kannada	441-28
13.	Tumkur	17237-20
14.	Kolar	16963-36
15.	Gulbarga	5978-31
16.	Bellary	5542-20
17.	Bangalore	3361-07
18.	Mysore	16152-22
19.	Shimoga	14688-17
	Total	131549-33